ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಇ-ಆಡಳಿತ/ಆಪೋ/2018-19

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-560012.
ದಿನಾಂಕ: 27-4-2019

## ಸುತ್ತೋಲೆ

**ವಿಷಯ:** 2018-19 ಸಾಲಿನ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ಫಲಿತಾಂಶದ ಮಾಹಿತಿಗಳನ್ನು ಆನ್‌ಲೈನ್ ಮೂಲಕ ಎಸ್‌ಎಟಿಎಸ್ ಪೋರ್ಟ್‌ಲ್‌ನಲ್ಲಿ ದಾಖಲಿಸುವ ಬಗ್ಗೆ.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2018-19ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ, ಅನುದಾನಿತ, ಖಾಸಗಿ ಅನುದಾನರಹಿತ, ವಿಭಜಿತ ಹಾಗೂ ಬಿಬಿಎಂಪಿ ಪದವಿ ಪೂರ್ವ ಕಾಲೇಜುಗಳ ಎಲ್ಲಾ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ಫಲಿತಾಂಶದ ವಿವರಗಳ ಮಾಹಿತಿಯನ್ನು ಆನ್‌ಲೈನ್ ಮೂಲಕ ಎಸ್‌ಎಟಿಎಸ್ ಪೋರ್ಟ್‌ಲ್‌ನಲ್ಲಿ ದಾಖಲಿಸಲು ಸೂಚಿಸಲಾಗಿದೆ.

ಈ ಸಂಬಂಧ ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ತಮ್ಮ ಕಾಲೇಜಿನ ಎಲ್ಲಾ ಪ್ರಥಮ ಪಿ.ಯು.ಸಿ ವಿದ್ಯಾರ್ಥಿಗಳ ಫಲಿತಾಂಶದ ವಿವರಗಳನ್ನು ಇಲಾಖಾ ವೆಬ್‌ಸೈಟ್ www.pue.kar.nic.in ನ Online Portal ರ "SATS" ಅಂಕಣದಲ್ಲಿ ಅಥವಾ www.sts.karnataka.gov.in/SATS ನೀಡಲಾಗಿರುವ ಲಿಂಕ್ ಮೂಲಕ ದಾಖಲಿಸಬೇಕಿರುತ್ತದೆ.

Online ಮೂಲಕ ವಿದ್ಯಾರ್ಥಿಗಳ ಫಲಿತಾಂಶದ ಮಾಹಿತಿಗಳನ್ನು ದಾಖಲಿಸಲು ಅನುಸರಿಸಬೇಕಾದ ಕ್ರಮಗಳು ಈ ಕೆಳಗಿನಂತಿದೆ.

- ಇಲಾಖಾ ವೆಬ್‌ಸೈಟ್ www.pue.kar.nic.in ನ Online Portal ರ "SATS" ನಲ್ಲಿ User ID: PPL_(CollegeCode)(ex. User id: PPL_AN100 Password: PPL_AN100) ಬಳಸಿ ಲಾಗಿನ್ ಆದ ನಂತರ ಪಾಸ್‌ವರ್ಡ್ ರಿಸೆಟ್ ಮಾಡುವುದು.
- ' IPUC STUDENT RESULT ' ಅನ್ನು ಆಯ್ಕೆ ಮಾಡುವುದು ಸದರಿ ಪುಟದಲ್ಲಿ ಕಾಂಬಿನೇಷನ್ ವೈಜ್ ಹುಡುಕಿ ಸಂಬಂಧಪಟ್ಟ ವಿದ್ಯಾರ್ಥಿಗಳಿಗೆ Enrollment No ಮೇಲೆ ಕ್ಲಿಕ್ ಮಾಡಿ ರಿಸಲ್ಟ್ ಅಪ್ಡೇಟ್ ಮಾಡುವುದು.
- ಎಲ್ಲಾ ವಿದ್ಯಾರ್ಥಿಗಳ RESULT ಅಪ್‌ಡೇಟ್ ಮಾಡಿದ ನಂತರ RESULT SHEET Generate ಮಾಡುವುದು.
- ಮುಂದುವರೆದು ಪಾಸ್‌ಆಗಿರುವ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ Promote Student ನಲ್ಲಿ ದ್ವಿತೀಯ ಪಿಯುಸಿಗೆ ಪ್ರೊಮೋಟ್ ಮಾಡುವುದು.

....2

ResultSheet ನ ವಿದ್ಯಾರ್ಥಿಗಳ ಎಲ್ಲಾ ಮಾಹಿತಿಗಳನ್ನು ಪ್ರಾಂಶುಪಾಲರು ಖುದ್ದಾಗಿ ಪರಿಶೀಲಿಸಿ, ಆಯ್ಕೆ ಮಾಡಿರುವ ವಿಷಯಗಳು, ಮಾಧ್ಯಮ ಹಾಗೂ ಭಾವಚಿತ್ರದಲ್ಲಿ ಯಾವುದೇ ನ್ಯೂನತೆಗಳು ಕಂಡುಬಂದಲ್ಲಿ, ದಾಖಲಾತಿಗಳನ್ನು ಪರಿಶೀಲಿಸಿ SATSನಲ್ಲಿ Edit Option ಮೂಲಕ ಸರಿಪಡಿಸಲು ಸೂಚಿಸಿದೆ. ನಂತರ RESULT SHEET ನ್ನು ಪ್ರತಿ ವಿದ್ಯಾರ್ಥಿಯಿಂದ ದೃಢೀಕರಿಸಿ, ದಿನಾಂಕ: 10–05–2019 ರ ಒಳಗೆ ಪರೀಕ್ಷಾ ಶಾಖೆಗೆ ಸಲ್ಲಿಸಲು ಸೂಚಿಸಿದೆ.

ಸಲ್ಲಿಸಿದ ಮಾಹಿತಿಯ ಪೂರ್ಣತೆ ಹಾಗೂ ನಿಖರತೆಗೆ ಪ್ರಾಂಶುಪಾಲರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಮಾಹಿತಿಗಳನ್ನು ಎಸ್‌ಎಟಿಎಸ್ ಮೂಲಕ ತಿದ್ದುಪಡಿಸಲು ದಿನಾಂಕ: 30–05–2019ರ ನಂತರ ಯಾವುದೇ ಅವಕಾಶವಿರುವುದಿಲ್ಲ.

**ಸೂಚನೆ:**

ದಿನಾಂಕ: 10–05–2019ರ ನಂತರ ಸಲ್ಲಿಸಿದ ವಿದ್ಯಾರ್ಥಿಗಳ ಯಾವುದೇ ಮಾಹಿತಿಗಳ ತಿದ್ದುಪಡಿಗೆ SATS ಮೂಲಕ **Edit Option** ನೀಡಲಾಗುವುದಿಲ್ಲ.

ಜಂಟಿ ನಿರ್ದೇಶಕರು(ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,

1. ರಾಜ್ಯ ಯೋಜನಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು– ಎಸ್‌ಎಟಿಎಸ್ ಪೋರ್ಟಲ್‌ನಲ್ಲಿ ಅಗತ್ಯ ಮಾಹಿತಿ ಅಳವಡಿಸಲು ಕೋರಿದೆ.
2. ಪದವಿ ಪೂರ್ವ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರಿಗೆ ಅಗತ್ಯ ಕ್ರಮಕ್ಕಾಗಿ.

ಪ್ರತಿ.

1. ಇ–ಆಡಳಿತ ಶಾಖೆ, ಇಲಾಖಾ ಅಂತರ್‌ಜಾಲದಲ್ಲಿ ಅಳವಡಿಸಲು.
2. ಕಛೇರಿ ಪ್ರತಿ.